C.W. 1

# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

## B summary ನಂ. 13/23

ಸಿ.ಡಬ್ಲ್ಯು 1

| | | |
|---|---|---|
| ಸಾಕ್ಷಿದಾರರ ಹೆಸರು | - | ದೀಪಕಕುಮಾರ್ ಶೆಣ್ವಿ |
| ಗಂಡನ ಹೆಸರು | - | ಪುರುಷೋತ್ತಮ ಶೆಣ್ವಿ |
| ವಯಸ್ಸು | - | 55 ವರ್ಷ |
| ಉದ್ಯೋಗ | - | ವ್ಯಾಪಾರ |
| ವಾಸ್ತವ್ಯ | - | ಸೋನಾರವಾಡಾ, ಕಾರವಾರ |

(ಇಂದು ದಿನಾಂಕಃ 05-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆ**

ಸನ್ 2009 ರಲ್ಲಿ ನಾನು ಕಬ್ಬಿಣದ ಅದಿರಿನ ವ್ಯಾಪಾರ ಮಾಡುತ್ತಿದ್ದೆನು. ಕಬ್ಬಿಣದ ಅದಿರನ್ನು ಖರೀದಿ ಮಾಡಿ ಬೇರೆ ಬೇರೆ ಟ್ರೇಡರ್ಸಗಳಿಗೆ ಪೂರೈಸುತ್ತಿದ್ದೆ. 2009 ನವೆಂಬರ್ ತಿಂಗಳಿನಲ್ಲಿ ಹೈದರಾಬಾದ್‌ನ ಶ್ರೀವತ್ಸ ಸುಂಕರ ಇವರು ನನ್ನನ್ನು ಸಂಪರ್ಕಿಸಿ ಕಬ್ಬಿಣದ ಅದಿರನ್ನು ಖರೀದಿ ಮಾಡುತ್ತೇನೆ ಅದಕ್ಕೆ ದಿನಾಂಕ 02-11-2009 ರಂದು ಆಫರ್ ಲೆಟರ್ ಕೊಟ್ಟಿದ್ದರು. ಆ ಆಫರ್ ಲೆಟರನ ಮಾನ್ಯತೆ ಕೇವಲ 5 ದಿನ ಮಾತ್ರ ಇತ್ತು. ಅವರು ಐದು ದಿನದಲ್ಲಿ ಯಾವುದೇ ವ್ಯಾಪಾರ ಮಾಡಿಲ್ಲ ಹಾಗೂ ನನ್ನನ್ನು ಸಂಪರ್ಕಿಸಿಲ್ಲ. ನಂತರ ಜನವರಿ ಒಂದನೇ ವಾರದಲ್ಲಿ ಇನ್ನೊಂದು ಆಫರ್ ಲೆಟರ್ ತೆಗೆದುಕೊಂಡು ಅದು 10 ಜನವರಿಗೆ 2010 ರಂದು ನನ್ನ ಜೊತೆ ಕರಾರುಪತ್ರ ಮಾಡಿಕೊಂಡಿದ್ದರು. ಆ ಕರಾರಿನ ಪ್ರಕಾರ ನನಗೆ ಹದಿನೈದು ಲಕ್ಷ ಮುಂಗಡ ಹಣ ಕೊಟ್ಟಿದ್ದರು. ಆ ಕರಾರಿನ ಮಾನ್ಯತೆ 40 ದಿನ ಮಾತ್ರ ಇತ್ತು. ಉಳಿದ ಹಣವನ್ನು ಆ ಮೇಲೆ ಕೊಡುತ್ತೇನೆ ಎಂದು ಹೇಳಿ 20 ಆದರೂ ಸಹ ನನ್ನನ್ನು ಸಂಪರ್ಕಿಸಿಲ್ಲ. ಸುಮಾರು 20 ದಿನಗಳ ನಂತರ ಪುನಃ ನನ್ನನ್ನು ಸಂಪರ್ಕ ಮಾಡಿದಾಗ ನಾನು ನಿರಾಕರಿಸಿರುತ್ತೇನೆ. ಅಷ್ಟರಲ್ಲಿ ಅವರು

ನನ್ನ ಖಾತೆಗೆ ಒಂದು ಕೋಟಿ ರೂಪಾಯಿ ವರ್ಗಾವಣೆ ಮಾಡಿದ್ದರು. ನಾನು ಕಾಂಟ್ರೆಕ್ಟನ್ನು ರದ್ದು ಮಾಡುವುದಾಗಿ ಹೇಳಿದಾಗ ಅವರು ಒಪ್ಪಿಕೊಂಡರು. ಹಣವನ್ನು ವಾಪಸ್ ಕೊಡಲು ಪತ್ರ ಕೊಟ್ಟಿದ್ದು ನಾನು ಅದರಂತೆ ಅವರಿಗೆ ಒಂದು ಕೋಟಿ 15 ಲಕ್ಷ ಹಣವನ್ನು ಮರುಪಾವತಿಸಿರುತ್ತೇನೆ. ಲೆಟರ್ ಆಫ್ ಕ್ರೆಡಿಟ್ ಪಡೆದು ನಾನು ಸಪ್ಲೆಯರ್ ಎಂದು ತೋರಿಸಿದ್ದರಿಂದ ಒಂದು ಬಾರಿ ಹಣ ನಿಮ್ಮ ಖಾತೆಗೆ ಹಾಕಿದ್ದೇನೆ ಎಂದು ಹೇಳಿದ್ದೆ. ನಾನು ಅವರಿಗೆ ನಿರಾಕರಿಸಿದರೂ ಸಹ ಅವರು ನನ್ನ ಖಾತೆಗೆ 6 ಕೋಟಿ 70 ಲಕ್ಷ ವರ್ಗಾವಣೆ ಮಾಡಿರುತ್ತಾರೆ. ಆ ಹಣವನ್ನು ನಾನು ಅವರಿಗೆ ಮರುಪಾವತಿ ಮಾಡಿರುತ್ತೇನೆ. ಮಾರ್ಚ 2010 ರಲ್ಲಿ ನನಗೆ ಒಂದು ಕರೆ ಬಂದಿದ್ದು ದತ್ತಾತ್ರೇಯ ವಾಲಕರ್ ಎಂಬ ವ್ಯಕ್ತಿ ಕರೆ ಮಾಡಿ ನಾವು ನಿಮ್ಮ ಖಾತೆಗೆ ಹಣ ಹಾಕಿದ್ದು ಆ ಹಣ ಎಲ್ಲಿ ಇದೆ ಎಂದು ಕೇಳಿದ್ದರು. ನಾನು ಅವರು ಯಾರು ಎಂದು ವಿಚಾರಿಸಿದಾಗ ಅವರು ಮೆಟಾಕ್ಯಾಮ್ ಮೆನಿಫೆಕ್ಚರ್ ಕಂಪನಿ ಎಂದು ತಿಳಿಸಿದ್ದು ನನಗೆ ಆ ಕಂಪನಿಯಿಂದ ಹಣ ಬಂದಿಲ್ಲ, ನನಗೆ ಸುಮಿತ್ರಾ ಅಪಾರ್ಟಮೆಂಟ್ ಕಂಪನಿಯಿಂದ ಹಣ ಬಂದಿದೆ ಎಂದು ತಿಳಿಸಿದ್ದೆ. ಸುಮಿತ್ರಾ ಅಪಾರ್ಟಮೆಂಟ್ ಬಳಿ ವಿಚಾರಿಸಿದಾಗ ಅವರು ಸಿಸ್ಟರ್ ಕನಸರನ್ ಎಂದು ಶ್ರೀವಾಸ್ತವ ಹೇಳಿದ್ದರು. ನಾನು ಮತ್ತೇ ಶ್ರೀವಾಸ್ತವ್ ಅವರಿಗೆ ಫೋನ್ ಮಾಡಿದಾಗ ಅವರುಫೋನ್ ಸ್ವೀಕರಿಸಿರುವುದಿಲ್ಲ. ಮೆಟಾಕ್ಯಾಮ್ ಮೆನಿಫೆಕ್ಚರ್ ಕಂಪನಿಯವರ ಮೇಲೆ ಬೆಲೇಕೇರಿ ಪೋರ್ಟನಲ್ಲಿ ಸಿ.ಬಿ.ಐ. ರವರು ಅಕ್ರಮವಾಗಿ ಕಬ್ಬಿಣದ ಅದಿರು ಸಾಗಾಟ ಮಾಡಿರುವ ಬಗ್ಗೆ ಪ್ರಕರಣ ದಾಖಲಿಸಿರುವ ಬಗ್ಗೆ ಗೊತ್ತಾಯಿತು. ಈ ಪ್ರಕರಣ ನಡೆಯುವಾಗ ಅದರಲ್ಲಿ ನನಗೆ ಸಾಕ್ಷಿದಾರರನ್ನಾಗಿ ಮಾಡಿರುತ್ತಾರೆ. ನಂತರ ಹಸನ್ ಬಬ್ರೇಜ್ ಖಾನ್ ಮತ್ತು ಅಕ್ಬರ್ ಅರೇಬಿಯನ್ ಎನ್ನುವವರು ನನಗೆ ಕರೆ ಮಾಡಿ ನೀನು ಆ ಪ್ರಕರಣದಲ್ಲಿ ಸಾಕ್ಷ ಹೇಳಬಾರದು ಮತ್ತು ನಮ್ಮ ಜೊತೆ ವ್ಯವಹಾರ ಇದ್ದ ಬಗ್ಗೆ ಒಂದು ಬ್ಯಾಕ್ ಡೇಟೆಡ್ ಎಗ್ರಿಮೆಂಟ್ ಮಾಡಿಕೊಡು ಎಂದು ಹೇಳಿದ್ದರು. ನಾನು ಅದನ್ನು ನಿರಾಕರಿಸಿರುತ್ತೇನೆ. ನಂತರ ಪೂಣಾದಲ್ಲಿ ಸಿವಿಲ್ ಪ್ರಕರಣವನ್ನು ಮೆಟಾಕ್ಯಾಮ್ ಮೆನಿಫೆಕ್ಚರ್ ಕಂಪನಿಯವರು ನನ್ನ ವಿರುದ್ಧ

ದಾಖಲಿಸಿರುತ್ತಾರೆ. ಅದರಲ್ಲಿ ದಾಖಲಾತಿಗಳ ಪ್ರತಿಯನ್ನು ತೆಗೆದುಕೊಂಡಾಗ ನನ್ನ ಸಹಿ ಉಳ್ಳ ನನ್ನ ಕಂಪನಿಯ ಹೆಸರಿನಲ್ಲಿ ಆಫರ್ ಲೆಟರ್ ಮಾಡಿ ದೇವಿ ಟ್ರೇಡಿಂಗ್, ಹಾಂಗಕಾಂಗ್ ಕಂಪನಿಗೆ ಕೊಟ್ಟಿರುತ್ತಾರೆ ಎಂದು ಗೊತ್ತಾಯಿತು. ಆ ಅಫರ್ ಲೆಟರ್ ಮೂಲಕ ಸುಮಾರು 44 ಕೋಟಿಗೆ ಲೆಟರ್ ಆಫ್ ಕ್ರೆಡಿಟ್ ಕಬ್ಬಿಣದ ಅದಿರಿನ ವ್ಯವಹಾರಕ್ಕೆ ಕೊಟ್ಟಿರುತ್ತಾರೆ ಎಂದು ಗೊತ್ತಾಯಿತು. ನಾನು ಅವರ ಬಳಿ ವಿಚಾರಿಸಿದಾಗ ಅವರು ಅದಕ್ಕೆ ಸರಿಯಾದ ಉತ್ತರ ಕೊಟ್ಟಿಲ್ಲ. ಆ ಕಾರಣ ಲೆಟರ್ ಹೆಡ್‌ನಲ್ಲಿ ನನ್ನ ಸಹಿ ಪೋರ್ಜರಿ ಮಾಡಿದ ಕಾರಣ ನಾನು ಅವರ ಮೇಲೆ ಪ್ರಕರಣ ದಾಖಲಿಸಿರುತ್ತೇನೆ. ಬ್ಯಾಂಕ್ ಮೆನೇಜರ್ ಇವರು ಸುಮಿತ್ರಾ ಅಪಾರ್ಟಮೆಂಟ್ ಕಂಪನಿಯ ಹೆಸರಿನಲ್ಲಿ ಆರ್.ಟಿ.ಜಿ.ಎಸ್.ನ್ನು ನನಗೆ ತಿಳಿಸದೇ ಮಾಡಿರುತ್ತಾರೆ ಎಂದು ಗೊತ್ತಾಗಿದ್ದು ಅವರ ಮೇಲೆ ಸಹ ದೂರು ಕೊಟ್ಟಿರುತ್ತೇನೆ.

ಪೊಲೀಸರು ಆರೋಪಿ ಕೊಟ್ಟ ಪ್ರಕರಣವನ್ನು ದಾಖಲಿಸಿ ನಮ್ಮ ದೂರಿನ ಮೇಲೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ